ಮಂತ್ರಿಯಂವರಿಂದ ಹೇಳಿಕೆ

ಸಹಕಾರ ಸಂಘಗಳ ಚುನಾವಣೆಯನ್ನು ಮುಂದೂಡುವ ಬಗ್ಗೆ

ಶ್ರೀ ಹೆಚ್. ಆರ್. ರಾಜು.—ಮಾನ್ಯ ಉಪಾಧ್ಯಕ್ಷರೇ, ನೆನ್ನೆ ದಿವಸ ಮಾನ್ಯ ಸದಸ್ಯರಾದ ಶ್ರೀ ಜಿ. ಎಸ್. ಆಚಾರ್‌ರವರು ನಿಯಮ ೩೩ಳಿರ ಅಡಿಯಲ್ಲಿ ಪ್ರಸ್ತಾಪ ಮಾಡಿದ ವಿಷಯದ ಬಗ್ಗೆ ಹೇಳಿಕೆಯನ್ನು ಕೊಡುತ್ತೇನೆ. ನಾನು ನಿನ್ನೆ ಈ ಸದನದಲ್ಲಿ ಸಹಕಾರ ಸಂಘಗಳ ಚುನಾವಣೆಗಳನ್ನು ಮುಂದೂಡುವ ಪ್ರಶ್ನೆ ಸರ್ಕಾರದ ಶೀವ್ರ ಪರಿಶೀಲನೆಯಲ್ಲಿದೆ ಎಂದು ಉತ್ತರ ನೀಡಿದ್ದು ಸರಿಯಷ್ಟೆ. ಈ ಬಗ್ಗೆ ನಿರ್ದಿಷ್ಟವಾದ ಹೇಳಿಕೆಯನ್ನು ನೀಡಬೇಕೆಂದು ಮಾನ್ಯ ಸದಸ್ಯರುಗಳು ಒತ್ತಾಯಿಸಿದ್ದರಿಂದ ಈ ಹೇಳಿಕೆಯನ್ನು ನೀಡುತ್ತಿದ್ದೇನೆ. ೧೯೮೭–೮೮ರಿಂದ ಮುಂದೂಡಲ್ಪಟ್ಟಿದ್ದ ಸಹಕಾರ ಸಂಘಗಳ ಮಹಾ ಸಭೆ ಮತ್ತು ಚುನಾವಣೆಗಳನ್ನು ಹಂತ ಹಂತವಾಗಿ ನಡೆಸುವ ಬಗ್ಗೆ ಈಗಾಗಲೇ ಸರ್ಕಾರದ ಆಜ್ಞೆಯಾಗಿರುವುದು ನಿಜವಾಗಿರುತ್ತದೆ. ಈಗ ಮಳೆಗಾಲವಾಗಿರುವ ಬಹುತೇಕ ರೈತರು ಕೃಷಿ ಕೆಲಸಗಳಲ್ಲಿ ಮಗ್ನರಾಗಿರುವ ಕಾರಣ ಮಹಾ ಸಭೆಗಳನ್ನು ಮತ್ತು ಚುನಾವಣೆಗಳನ್ನು ಮುಂದೂಡಬೇಕೆಂಬ ಮನವಿಯನ್ನು ಹಲವಾರು ಸಹಕಾರ ಸಂಘಗಳು ಅರ್ಜಿಗಳ ಮೂಲಕ ಹಾಗೂ ಟೆಲಿಗ್ರಾಂ ಮೂಲಕ ಒತ್ತಾಯಿಸಿರುತ್ತಾರೆ.

ಈ ಎಲ್ಲಾ ಅಂಶಗಳನ್ನು ಪರಿಗಣಿಸಿ ಚುನಾವಣೆಗಳಲ್ಲಿ ರೈತರು ಸಕ್ರಿಯವಾಗಿ ಪಾಲ್ಗೊಳ್ಳಬೇಕೆಂಬ ಏಕೈಕ ಉದ್ದೇಶದಿಂದ ಚುನಾವಣೆಗಳನ್ನು ಮತ್ತು ಮಹಾ ಸಭೆಗಳನ್ನು ಮುಂದೂಡಿದೆ ಎಂದು ಸದನದ ಮೂಲಕ ಮಾನ್ಯ ಸದಸ್ಯರ ಗಮನಕ್ಕೆ ತರಲು ಇಚ್ಛಿಸುತ್ತೇನೆ.

ಉಪಾಧ್ಯಕ್ಷರು.—ಈಗ ಸಭೆಯನ್ನು ಮುಂದೂಡಿದ್ದೇನೆ.

(ಗೊಂದಲ)

ಶ್ರೀ ಪಿ. ಜಿ. ಆರ್. ಸಿಂಧ್ಯ.—ಎಲ್ಲಿಯವರೆಗೆ ಮುಂದೂಡಿದ್ದೀರಿ ?

ಉಪಾಧ್ಯಕ್ಷರು.—ಸದನ ಈಗ ಮುಂಕ್ತಾಯವಾಗಿ ನಾಳೆ ಬೆಳಿಗ್ಗೆ ಮತ್ತೆ ೧೧–೦೦ ಗಂಟೆಗೆ ಪುನಃ ಸೇರುತ್ತದೆ.

(ಸದನವು ೭–೩೦ಕ್ಕೆ ಮುಂಕ್ತಾಯವಾಗಿ ಮತ್ತೆ ದಿನಾಂಕ ೧೪–೬–೧೯೯೦ರ ಗುರುವಾರದಂದು ಬೆಳಿಗ್ಗೆ ೧೧–೦೦ ಗಂಟೆಗೆ ಪುನಃ ಸೇರಲು ನಿಶ್ಚಯಿಸಿತು).